**I Year LL.B. (3 Years Course)/I Sem. LL.B. (3 Years Course)/III Year LL.B. (5 Years Course)/V Sem. LL.B. (5 Years Course) Examination, December 2007**
**(RRS/NS/Semester Scheme)**

# LAW

## Contract – I

## General Principles of Contract and Specific Relief Act

Time: 3 Hours Max. Marks: 100

***Instruction:*** *1) Answer Q. No.* ***9*** *and* ***any five*** *of the remaining.*
*2) Answers must be written completely either in* ***Kannada*** *or in* ***English****.*

1. A) "An Agreement enforceable by Law is a contract". Discuss. **10**
ಕಾನೂನಿಗೆ ಅನುಗುಣವಾಗಿ ಜಾರಿಗೆ ತರಬಹುದಾದ ಒಪ್ಪಂದವು ಕರಾರುವಾಗುತ್ತದೆ. ಚರ್ಚಿಸಿರಿ.

B) Anand says in a conversation to Ravi that he will give Rs. 25,000/- to a person who so ever marries his daughter. Ramu marries Anand's daughter and files suit for recovery of Rs. 25,000/-. Will he succeed ? **6**
ಆನಂದನು ರವಿಯೊಡನೆ ಮಾತನಾಡುವಾಗ ನನ್ನ ಮಗಳನ್ನು ಮದುವೆಯಾದವರಿಗೆ 25,000/- ರೂಪಾಯಿಗಳನ್ನು ಕೊಡುವುದಾಗಿ ಹೇಳುತ್ತಾನೆ. ರಾಮು ಆನಂದನ ಮಗಳನ್ನು ಮದುವೆಯಾಗುತ್ತಾನೆ ಮತ್ತು 25,000 ರೂಪಾಯಿ ವಸೂಲಿಗೋಸ್ಕರ ದಾವೆ ಹೂಡುತ್ತಾನೆ.
ಅವನು ದಾವೆ ಗೆಲ್ಲಬಲ್ಲನೆ ?

2. A) Explain consent. When it is said to be free ? **10**
ಸಮ್ಮತಿಯನ್ನು ವ್ಯಾಖ್ಯಾನಿಸಿರಿ. ಅದು ಯಾವಾಗ ಮುಕ್ತವಾದದೆಂದು ಹೇಳಲಾಗುತ್ತಿದೆ ?

B) 'A' an old man with feeble sight endorsed a bill of exchange thinking it was guarantees. There was no negligence on the part of 'A'. Is A liable ? **6**
"ಅ" ಎಂಬ ಒಬ್ಬ ದೃಷ್ಟಿ ಸರಿಯಾಗಿ ಕಾಣದ ಮುದುಕನು ಬಿಲ್ ಆಫ್ ಎಕ್ಸ್‌ಚೆಂಜನ್ನು ಗ್ಯಾರಂಟಿ ಎಂದು ತಿಳಿದು ಸಹಿ ಮಾಡುತ್ತಾನೆ. ಹಾಗೆ ಮಾಡುವಲ್ಲಿ "ಅ" ನು ಯಾವುದೇ ಅಲಕ್ಷತೆ ಮಾಡುವುದಿಲ್ಲ.
"ಅ" ನು ಭಾದ್ಯನೆ ?

3. A) Discuss the law relating to minors agreements. **10**
ಅಪ್ರಾಪ್ತ ವಯಸ್ಕನ ಒಪ್ಪಂದತೆಗೆ ಅನ್ವಯಿಸುವ ನಿಯಮಗಳನ್ನು ವಿವರಿಸಿರಿ.

B) Raju, a minor has lent Rs. 1,000/- against a promissory notes executed in his favour. Is borrower liable ? 6

ರಾಜು ಎಂಬ ಅಪ್ರಾಪ್ತ ವಯಸ್ಕನು ಸಾಲ ಪತ್ರದ ಮೇಲೆ ರೂಪಾಯಿ 1,000 ಸಾಲವನ್ನು ಕೊಟ್ಟಿರುತ್ತಾನೆ. ಸಾಲ ಪಡೆದವನು ಅದಕ್ಕೆ ಭಾದ್ಯನೆ ?

4\. A) Explain the doctrine of frustration with reference to decided cases. 10

ಆಶಾಭಂಗ (ಭಗ್ನತೆ) ತತ್ವವನ್ನು ತೀರ್ಮಾನಿತ ಪ್ರಕರಣಗಳ ಆಧಾರದ ಮೇಲೆ ವಿವರಿಸಿರಿ.

B) Anand agreed to hire Vinayak's rooms in Mysore for the purpose of seeing The Dasara Procession on 14th and 15th October. Due to the Earth quake no Dasara procession took place on those days, now Vinayaka intends to recover the agreed rent. Advise him. 6

ಆನಂದ ಎಂಬುವನು ಅಕ್ಟೋಬರ 14 ಮತ್ತು 15 ರಂದು ಮೈಸೂರಿನಲ್ಲಿ ಜರುಗುವ ದಸರಾ ಮಹೋತ್ಸವ ನೋಡುವುದಕ್ಕಾಗಿ ವಿನಾಯಕ ಎಂಬುವನ ಕೋಣೆಗಳನ್ನು ಬಾಡಿಗೆಗೆ ತೆಗೆದುಕೊಳ್ಳಲು ಒಪ್ಪಂದ ಮಾಡಿಕೊಂಡಿರುತ್ತಾನೆ. ಭೂಕಂಪದ ಕಾರಣವಾಗಿ ದಸರಾ ಮಹೋತ್ಸವ ಕಾರ್ಯಕ್ರಮ ನಡೆಯಲಿಲ್ಲ. ಈಗ ವಿನಾಯಕನು ಆನಂದನಿಂದ ಒಪ್ಪಂದದಂತೆ ಪೂರ್ಣ ಬಾಡಿಗೆ ಪಡೆಯಲು ಇಚ್ಛಿಸುತ್ತಾನೆ. ಅವನಿಗೆ ಸಲಹೆ ನೀಡಿರಿ.

5\. A) Distinguish between Wagering agreement and a contingent contract. 10

ಜೂಜಿನ ಒಪ್ಪಂದ ಮತ್ತು ಅವಲಂಬಿತ ಕರಾರಿನ ಮಧ್ಯದ ವ್ಯತ್ಯಾಸವೇನು ?

B) A music hall was agreed to be let out on certain day. But before that day it was destroyed by fire. Is the promisor absolved from the contract ? 6

ನಿಗದಿಪಡಿಸಿದ ದಿನದಂದು ಒಂದು ಸಂಗೀತದ ಕೊಠಡಿಯನ್ನು ಬಾಡಿಗೆಗೆ ಕೊಡಲು ಒಪ್ಪಂದವಾಗಿರುತ್ತದೆ. ಆ ದಿನದ ಮೊದಲೇ ಅದು ಬೆಂಕಿಯಿಂದ ನಾಶವಾಗುತ್ತದೆ. ವಚನಕಾರನು ವಚನದಿಂದ ಮುಕ್ತನೆ ?

6\. A) Explain the different remedies available for breach of contract. 10

ಕರಾರಿನ ಉಲ್ಲಂಘನೆಗೆ ದೊರಕುವ ವಿವಿಧ ಪರಿಹಾರಗಳನ್ನು ವಿವರಿಸಿರಿ.

B) 'X' a dealer in fruits, leaves a pocket containing fruits at 'Y's house by mistake. "Y" consumes these fruits. Can 'X' recover money ? 6

'ಎಕ್ಸ್' ಎನ್ನುವ ಒಬ್ಬ ಹಣ್ಣಿನ ವ್ಯಾಪಾರಿ, 'ವೈ' ಮನೆಯಲ್ಲಿ ಹಣ್ಣುಗಳ ಪೊಟ್ಟಣವನ್ನು ತಪ್ಪು ತಿಳುವಳಿಕೆಯಿಂದ ಬಿಟ್ಟು ಹೋಗುತ್ತಾನೆ. 'ವೈ' ನು ಹಣ್ಣುಗಳನ್ನು ತಿನ್ನುತ್ತಾನೆ. 'ಎಕ್ಸ್' ನು ಹಣವನ್ನು ವಸೂಲಿ ಮಾಡಬಹುದೇ ?

7\. What is quasi-contract ? When quasi-contractual liability arises. 16

ಅರೆ ಕರಾರು ಎಂದರೇನು ? ಅರೆ ಕರಾರಿನ ಹೊಣೆಗಾರಿಕೆ ಯಾವಾಗ ಉದ್ಭವವಾಗುತ್ತದೆ ?

8. Answer **any two** of the following:
ಈ ಕೆಳಗಿನ ಯಾವುದಾದರೂ **ಎರಡಕ್ಕೆ** ಉತ್ತರಿಸಿರಿ.

A) Counter proposal. **8**
ಪ್ರತಿ ಪ್ರಸ್ತಾವನೆ.

B) Public policy. **8**
ಸಾರ್ವಜನಿಕ ನೀತಿ.

C) Ambiguous contracts. **8**
ಅನಿಶ್ಚಿತ ಕರಾರುಗಳು.

9. Answer **any two** of the following:
ಈ ಕೆಳಗಿನ ಯಾವುದಾದರೂ **ಎರಡಕ್ಕೆ** ಉತ್ತರಿಸಿ.

A) "Specific relief is a discretionary remedy" – Comment. **10**
"ನಿರ್ದಿಷ್ಟ ನಿರ್ವಹಣೆ ಪರಿಹಾರವು ನ್ಯಾಯಾಧೀಶರ ಸ್ವಂತ ವಿವೇಚನೆಗೆ ಬಿಟ್ಟದ್ದು" - ಟೀಕಿಸಿ.

B) Which contracts cannot be specifically enforced ? **10**
ಯಾವ ಕರಾರುಗಳನ್ನು ನಿರ್ದಿಷ್ಟವಾಗಿ ಜಾರಿಗೊಳಿಸಲು ಬರುವುದಿಲ್ಲ ?

C) Explain:
i) Temporary Injunction. **10**
ii) Mandatory Injunction.

ವಿವರಿಸಿರಿ:
i) ತಾತ್ಕಾಲಿಕ ನಿರ್ಬಂಧಕ ಆಜ್ಞೆ.
ii) ಆಜ್ಞಾಪಕ ನಿರ್ಬಂಧಕ ಆಜ್ಞೆ.

---